ಆ) ಅವುಗಳಲ್ಲಿ ಹಾಸನ ಜಿಲ್ಲೆಯಲ್ಲಿನ ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ.

ಏತ ನೀರಾವರಿ ಯೋಜನೆಗಳ ನಿಗಮಗಳ ಬಗ್ಗೆ

೧೪೬೫(೨೯೦೯) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ). ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಏತ ನೀರಾವರಿ ಯೋಜನೆಯ ನಿಗಮ ಅಸ್ತಿತ್ವಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಯಾವಾಗ ಅಸ್ತಿತ್ವಕ್ಕೆ ಬಂದಿದೆ?

ಆ) ಈ ನಿಗಮದಲ್ಲಿ ಎಷ್ಟು ಜನ ನೌಕರರಿದ್ದಾರೆ, ಆ ಪೈಕಿ ಹಂಗಾಮಿ ನೌಕರರೆಷ್ಟು ಮಂದಿ ಇದ್ದಾರೆ, ಇದರ ಪೂರ್ಣ ವಿವರಗಳನ್ನು ಒದಗಿಸುವುದು?

ಇ) ಈ ನಿಗಮದಲ್ಲಿ ಎಷ್ಟು ಜನ ಸಹಾಯಕ ಇಂಜಿನಿಯರುಗಳು ಇದ್ದಾರೆ?

ಶ್ರೀ ಪೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು. ಜೂನ್ 1986ರಲ್ಲಿ ಅಸ್ತಿತ್ವಕ್ಕೆ ಬಂದವು.

ಆ) 325 ನೌಕರರಿದ್ದು, ಅವರಲ್ಲಿ 283 ಜನ ತಾತ್ಕಾಲಿಕ ನೌಕರರು (ಪಟ್ಟಿ ಲಗತ್ತಿಸಲಾಗಿದೆ).

ಇ) 94.

ಮೈಸೂರಿನ ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ನಿಯಮಿತ ಮತ್ತು ಬಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆಯನ್ನು ತೋರಿಸುವ ಪಟ್ಟಿ :

ಕ್ರಮ ಸಂಖ್ಯೆ	ಪದನಾಮ	ಸರ್ಕಾರದಿಂದ ನಿರೋಜಿಸಲ್ಪಟ್ಟ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ	ತಾತ್ಕಾಲಿಕ ನೌಕರರ ಸಂಖ್ಯೆ	ಒಟ್ಟು ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ
1	2	3	4	5
1	ವ್ಯವಸ್ಥಾಪಕ ನಿರ್ದೇಶಕರು (ಮುಖ್ಯ ಇಂಜಿನಿಯರ್)	2	—	2
2	ಉಪ ನಿರ್ದೇಶಕರು (ಎಕ್ಸಿಕ್ಯುಟಿವ್ ಇಂ.)	2	—	2
3	ಎಕ್ಸಿಕ್ಯುಟಿವ್ ಇಂಜಿನಿಯರ್	4	—	4
4	ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್	11	—	11
5	ಅಸಿಸ್ಟೆಂಟ್ ಇಂಜಿನಿಯರ್	1	93	94
6	ಜೂನಿಯರ್ ಇಂಜಿನಿಯರ್	3	35	38
7	ಡ್ರಾಫ್ಟ್ಸ್‌ಮನ್	—	6	6
8	ಟ್ರೇಸರ್	—	3	3
9	ಬ್ಲೂ ಪ್ರಿಂಟರ್	—	3	3
10	ರೆವಿನ್ಯೂ ಸರ್ವೆಯರ್	—	1	1
11	ಚೀಫ್ ಅಕೌಂಟ್ಸ್ ಆಫೀಸರ್	—	2	2
12	ಅಕೌಂಟ್ಸ್ ಸೂಪರಿಂಟೆಂಡೆಂಟ್	5	—	5
13	ಪ್ರಥಮ ದರ್ಜೆ ಅಕೌಂಟ್ಸ್ ಸಹಾಯಕ	1	5	6
14	ದ್ವಿತೀಯ ದರ್ಜೆ ಅಕೌಂಟ್ಸ್ ಸಹಾಯಕ	1	3	4
15	ಮ್ಯಾನೇಜರ್	1	—	1
16	ಪ್ರಥಮ ದರ್ಜೆ ಸಹಾಯಕ	5	12	17

1	2	3	4	5
17	ಸ್ಟೋರ್ ಕೀಪರ್	3	3	6
18	ದ್ವಿತೀಯ ದರ್ಜೆ ಸಹಾಯಕ	—	29	29
19	ಶೇಫ್ಹಲಿಪಿಗಾರ	—	2	2
20	ಬೆರಳಚ್ಚುಗಾರ	—	24	24
21	ಆಟೆಂಡರ್	—	1	1
22	ಡ್ರೈವರ್	1	17	18
23	ಜವಾನರು	1	33	34
24	ವಾಚ್‌ಮನ್	1	11	12
	ಒಟ್ಟು	42	283	325

ಕಾನೂನು ಕಾಲೇಜು ಅಧ್ಯಾಪಕರಿಗೆ ಚೆಕ್ ಮೂಲಕ ವೇತನ ಪಾವತಿ

೧೪೮೬(೨೮೪೩) ಶ್ರೀ ಕೆ. ಪ್ರತಾಪಚಂದ್ರ ರೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಖಾಸಗಿ ಕಾನೂನು ಕಾಲೇಜುಗಳ ಸಂಖ್ಯೆ ಹಾಗೂ ಹೆಸರುಗಳೇನು?

ಆ) ಈ ಕಾಲೇಜುಗಳಲ್ಲಿ ಯಾವ ಯಾವ ಕಾಲೇಜುಗಳ ಅಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಗೆ ಸರ್ಕಾರವು ಚೆಕ್ ಮೂಲಕ ವೇತನ ಪಾವತಿ ಮಾಡುತ್ತಿದೆ?

ಇ) ಈ ಚೆಕ್ ವೇತನ ಪಾವತಿಗೆ ಇರುವ ಮಾನದಂಡಗಳೇನು?

ಈ) ಎಷ್ಟು ಕಾಲೇಜುಗಳ ಹಣಕಾಸು ವ್ಯವಹಾರಗಳ ಆಡಿಟನ್ನು ಶಿಕ್ಷಣ ಇಲಾಖೆಯು ಮುಖಾಂತರ ಮಾಡಲಾಗಿದೆ?

ಉ) ಇನ್ನು ಬಾಕಿ ಉಳಿದ ಕಾಲೇಜುಗಳ ಅಧ್ಯಾಪಕರಿಗೆ ಯಾವಾಗ ಚೆಕ್ ಮೂಲಕ ವೇತನ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) 41 ಕಾಲೇಜುಗಳ ಹೆಸರುಗಳನ್ನೊಳಗೊಂಡ ಪಟ್ಟಿಯನ್ನು ಇದಕ್ಕೆ ಲಗತ್ತಿಸಿದೆ.

ಆ) 1. ಕೃಷ್ಣ ಕಾನೂನು ಕಾಲೇಜು, ಹಾಸನ
2. ಶಾರದ ವಿಲಾಸ ಕಾನೂನು ಕಾಲೇಜು, ಮೈಸೂರು
3. ಎಂ.ಎಂ. ಕಾನೂನು ಕಾಲೇಜು, ಸಿರ್ಸಿ
4. ಆರ್.ಎಲ್. ಕಾನೂನು ಕಾಲೇಜು, ಬೆಳಗಾಂ
5. ಸಿದ್ಧಾರ್ಥ ಕಾನೂನು ಕಾಲೇಜು, ಗುಲ್ಬರ್ಗಾ

ಇ) ಚೆಕ್ ಮೂಲಕ ವೇತನ ಪಾವತಿ ಪಡೆಯಬೇಕಾದ ಕಾಲೇಜು ವೇತನಾನುದಾನಕ್ಕೆ ಅರ್ಹತೆ ಹೊಂದಿದ್ದು ದಿನಾಂಕ 1-7-85ಕ್ಕಿಂತ ಮುಂಚೆ ಪ್ರಾರಂಭವಾಗಿದ್ದರೆ 7 ವರ್ಷಗಳಾಗಿರುವುದರೆ ಜೊತೆಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸಿರಬೇಕಾಗುತ್ತದೆ.

1. ಕನಿಷ್ಟ 80 ವಿದ್ಯಾರ್ಥಿಗಳ ಸಂಖ್ಯೆ ಹೊಂದಿರಬೇಕು
2. ಖೋತಾ ಆಯವ್ಯಯ ಇರಬೇಕು
3. ಸಂಬಂಧಪಟ್ಟ ವಿಶ್ವವಿದ್ಯಾನಿಲಯ ವಿಧಿಸಿರುವ ಷರತ್ತುಗಳನ್ನು ಪೂರೈಸಿರಬೇಕು.

ಆದರೆ ಕಾಲೇಜುಗಳನ್ನು ಅನುದಾನಕ್ಕೊಳಪಡಿಸುವುದು, ರಾಜ್ಯದ ಆಯವ್ಯಯದಲ್ಲಿ ಹಣದ ಲಭ್ಯತೆಯನ್ನು ಅವಲಂಬಿಸಿರುತ್ತದೆ.

ಈ) 20.